ಶ್ರೀಮತಿ ಮೋಟಮ್ಮ : ಕೆಲವು ಹುದ್ದೆಗಳು ಈ ಜನಕ್ಕೆ ಏನು ಸಿಗಬೇಕಾಗಿತ್ತೋ ಅವು ಕೈತಪ್ಪಿ ಹೋಗಿವೆ. 1984ರಲ್ಲಿ ಸಾಕಷ್ಟು ಹುದ್ದೆಗಳನ್ನು ಕಾಲ್‌ಫರ್ ಮಾಡಿದ್ದಾರೆ. ಅದರಲ್ಲಿ ಮ್ಯಾನೇಜರ್ ಪೋಸ್ಟ್, ಪ್ರಾಜೆಕ್ಟ್ ಆಫೀಸರ್ಸ್ ಪೋಸ್ಟ್, ಅಸಿಸ್ಟೆಂಟ್ ಇಂಜನಿಯರ್ ಪೋಸ್ಟ್ ಪರ್ಸನಲ್ ಅಸಿಸ್ಟಂಟ್ ಪೋಸ್ಟ್, ರೆಕಾರ್ಡ್ ಕೀಪರ್, ಸ್ಟನೋಗ್ರಾಫರ್ ಪೋಸ್ಟ್ ಏನಿದೆ, ಇದರಲ್ಲೇ ವ್ಯತ್ಯಾಸ ಮಾಡಿದ್ದಾರೆ. ಏಕೆಂದರೆ, ಎರಡು ಪೋಸ್ಟ್, ಹರಿಜನರಿಗೆ ಇಟ್ಟಿದ್ದರೆ ಎರಡನ್ನು ತುಂಬಲಿಕ್ಕೆ ಆಗಿಲ್ಲ, ಕೆಲವರಿಗೆ ಕೊಟ್ಟಿದ್ದಾರೆ. ಕೆಲವೊಂದನ್ನು ಮೇಜರ್ ಕಮ್ಯೂನಿಟಿಗೆ ತುಂಬಿದ್ದಾರೆ. ಅದಕ್ಕೆ ನಾನು ಏನು ಹೇಳುತ್ತಿದ್ದೇನೆಂದರೆ ರಿಸರ್ವೇಶನ್‌ನಲ್ಲಿ ಹರಿಜನರಿಗೆ ಸಿಗಬೇಕಾದ ಒಂದು ಹುದ್ದೆ ಈಗ ಏನು ಕೈತಪ್ಪಿಹೋಗಿದೆ. ಅದು ಪುನಃ ತುಂಬಿ ಅವರಿಗೆ ನ್ಯಾಯ ಒದಗಿಸಿಕೊಡುತ್ತೀರಾ ಎನ್ನುವುದು ಮೊದಲನೆ ಪ್ರಶ್ನೆ. ಎರಡನೆಯದು, ದಿನಾಂಕ 28-10-92ರಲ್ಲಿ ವಿಧಾನಸಭೆಯ ಹರಿಜನ ಗಿರಿಜನ ಕಲ್ಯಾಣ ಸಮಿತಿ ಈ ಒಂದು ಬೋರ್ಡಿಗೆ ಭೇಟಿ ಮಾಡಿ ಸಂಬಂಧಪಟ್ಟ ಅನ್ಯಾಯಗಳನ್ನೆಲ್ಲಾ ನಾವು ಅಧಿಕಾರಿಗಳ ಗಮನಕ್ಕೆ ತಂದು, ಏಕೆ ಹೀಗೆ ಆಗಿದೆ, ಇದನ್ನು ಕೂಡಲೇ ಸ್ಪರಿಪಡಿಸಬೇಕು ಎಂದ್ದು ಹೇಳಿ, ಇಷ್ಟು ದಿವಸಗಳಾದರೂ ಸಹ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಲಿಲ್ಲ. ಇದಕ್ಕೆ ಮುಖ್ಯ ಕಾರಣ ಸರ್ಕಾರವನ್ನು ಯಾರು ಪ್ರತಿನಿಧಿಸುತ್ತಾರೆ ಅಂತಹ ಅಧಿಕಾರಿಗಳು ಮೊದಲನೆಯದಾಗಿ ಹೊಣೆಯಾಗಿರುತ್ತಾರೆ. ಬೋರ್ಡ್ ಅಧಿಕಾರಿಗಳು ಹೊಣೆಯಾಗಿರುತ್ತಾರೆ. ಅವರ ಮೇಲೆ ನೀವು ಉಗ್ರ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯಸದಸ್ಯರು ಕೊನೆಯಲ್ಲಿ ಹೇಳಿದಂತಹ ವಿಚಾರಗಳಿಗೆ ನಾನು ಮೊದಲೆ ಉತ್ತರ ಕೊಟ್ಟಿದ್ದೇನೆ. ಆದರೆ ಬ್ಯಾಕ್‌ಲ್ಯಾಗ್ ತುಂಬಿಸತಕ್ಕಂತಹ ರೀತಿಯಲ್ಲಿ ಏನು ಕಾರ್ಯಕ್ರಮ ತೆಗೆದುಕೊಳ್ಳ ಬೇಕೋ ಅದನ್ನು ನಾನು ತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷಣಿಯವರು : ಶ್ರೀ ಕೆ. ಲಕ್ಷ್ಮಣ್ಣನವರ 123(481)ನೇ ಪ್ರಶ್ನೆಗೆ ಮಾನ್ಯ ಮುಖ್ಯ ಮಂತ್ರಿಗಳು ಟೈಂ ಕೇಳಿದ್ದಾರೆ, ಆದ್ದರಿಂದ ಈ ಪ್ರಶ್ನೆಯಲ್ಲಿ ವಿತ್‌ಹೆಲ್ಡ್ ಮಾಡುತ್ತಿದ್ದೇವೆ. ಅದನ್ನು ಮುಂದೆ ತೆಗೆದುಕೊಳ್ಳುತ್ತೇವೆ.

ರಾಜ್ಯದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ

422 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರದ ಆಕ್ರಮಣ ನಡೆಯುತ್ತಿರುವ ಪ್ರಮಾಣ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಅದನ್ನು ತಡೆಯಲು ಸರ್ಕಾರವು ಯಾವ ಪರಿಣಾಮಕಾರಿ ಕ್ರಮ ಕೈಗೊಂಡಿದೆ?

ಇ) ಅತ್ಯಾಚಾರ ಮತ್ತು ದೌರ್ಜನ್ಯಕ್ಕೊಳಗಾದ ಮಹಿಳೆಯರನ್ನು ಮರುವಸತಿಗೊಳಿಸಲು ಸರ್ಕಾರ ತೆಗೆದುಕೊಂಡ ತೀವ್ರ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ರಾಜ್ಯದ ಮಹಿಳೆಯರ ಮೇಲೆ ಅತ್ಯಾಚಾರದ ಪ್ರಮಾಣ ಹೆಚ್ಚಾಗಿರುವುದು ಕಂಡು ಬಂದಿಲ್ಲ.

ಆ) ಅತ್ಯಾಚಾರದ ದೂರು ಬಂದ ತಕ್ಷಣವೇ ಮೊಕದ್ದಮೆ ದಾಖಲು ಮಾಡಿಕೊಂಡು ನಿಷ್ಪಕ್ಷಪಾತವಾದ ತನಿಖೆ ಕೈಗೊಂಡು ಸಂಬಂಧಪಟ್ಟ ಆರೋಪಿಗಳನ್ನು ದಸ್ತಗಿರಿ ಮಾಡಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು.

ಇ) ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಅನೈತಿಕ ವ್ಯವಹಾರ(ನಿಷೇಧ) ಅಧಿನಿಯಮದ ಮೇರೆಗೆ ತರಬೇತಿ ಮತ್ತು ಪುನರ್ವಸತಿಗಾಗಿ ನ್ಯಾಯಾಲಯದಿಂದ ಕಳುಹಿಸಲ್ಪಟ್ಟ ಮಹಿಳೆಯರನ್ನು ಸ್ವೀಕರಿಸಲು ರಾಜ್ಯದಲ್ಲಿ 11 ಸ್ವೀಕಾರ ಕೇಂದ್ರಗಳು ಮತ್ತು 8 ರಾಜ್ಯ ಗೃಹಗಳು ಇವೆ. ಮಹಿಳೆಯರ ಅನೈತಿಕ ವ್ಯವಹಾರ ನಿಷೇಧ ಅಧಿನಿಯಮದ ಮೇರೆಗೆ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಮಾತ್ರ ಪ್ರವೇಶ ದೊರಕಿಸಿ ಕೊಡಲು ಬೆಂಗಳೂರಿನ ರಾಜ್ಯ ಮಹಿಳಾನಿಲಯದಲ್ಲಿ ಅವಕಾಶ ಕಲ್ಪಿಸಿಲಾಗಿದೆ. ನ್ಯಾಯಾಲಯಗಳು ಮತ್ತು ರಾಜ್ಯದ ಗೃಹಗಳಿಂದ ಹಾಗೂ ಸ್ವೀಕಾರ ಕೇಂದ್ರಗಳಿಂದ ವರ್ಗಾಯಿಸಲ್ಪಟ್ಟವರನ್ನು ಸಹ ರಾಜ್ಯ ಮಹಿಳಾ ನಿಲಯದಲ್ಲಿ ಸೇರಿಸಿಕೊಳ್ಳಲಾಗಿದೆ.

ರಾಜ್ಯ ಗೃಹಗಳಲ್ಲಿರುವ ಮಹಿಳೆಯರಿಗೆ ತರಬೇತಿ ನೀಡಲು ನೆಯ್ಗೆ, ಹೊಲಿಗೆ ಕಸೂತಿಯಂತಹ ಕರಕುಶಲ ಮತ್ತು ಹಿಡಕೆಗಳನ್ನು ತಯಾರಿಸುವುದು, ಸಿದ್ಧಪಡಿಸಿದ ಉಡುಪುಗಳು. ಕ್ಯಾನ್‌ವಾಸ್ ಬ್ಯಾಗ್ ತಯಾರಿಸುವುದು ಮತ್ತು ಕೈಮಗ್ಗ ನೇಯ್ಗೆ ಮುಂತಾದವುಗಳಿಗಾಗಿ ಉತ್ಪಾದನಾ ಘಟಕಗಳನ್ನು ಪ್ರಾರಂಭಿಸಲಾಗಿದೆ. ಬಳ್ಳಾರಿ ಮತ್ತು ಮೈಸೂರಿನಲ್ಲಿರುವ ಮಹಿಳೆಯರ ರಾಜ್ಯಗೃಹಗಳಲ್ಲಿ ಮಜೂರಿ ನೀಡುವ ಪದ್ಧತಿಯನ್ನು ಸಹ ಪ್ರಾರಂಭಿಸಲಾಗಿದೆ. ರಾಜ್ಯಗೃಹಗಳಲ್ಲಿ ಟೋಯರ್ ಸೆಕೆಂಡರಿ ಮತ್ತು ಎಸ್.ಎಸ್.ಎಲ್.ಸಿ ತರಗತಿಗಳಿಗೆ ಕಂಡೆನ್ಸರ್ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ.

ಇವುಗಳಲ್ಲದೆ ಸಂಕಷ್ಟದಲ್ಲಿರುವ ಮಹಿಳೆಯರಿಗೆ ತರಬೇತಿ ಕೇಂದ್ರಗಳನ್ನು ಸ್ಥಾಪಿಸುವ ಸ್ವಯಂ ಸೇವಾ ಸಂಸ್ಥೆಗಳಿಗೆ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲು ಬೇಕಾಗುವ ವೆಚ್ಚಗಳ ಶೇಕಡಾ 90ರಷ್ಟನ್ನು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ವತಿಯಿಂದ 45:45ರಷ್ಟು ನೀಡಲಾಗುತ್ತಿದೆ. ಉಳಿದ ಶೇಕಡಾ 10ರಷ್ಟನ್ನು ಸ್ವಯಂ ಸೇವಾ ಸಂಸ್ಥೆಗಳು ಭರಿಸಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಸನ್ಮಾನ್ಯ ಅಧ್ಯಕ್ಷೆಯವರೇ, ಕರ್ನಾಟಕ ರಾಜ್ಯದಲ್ಲಿ ಮಹಿಳೆಯರ ಮೇಲೆ ಆಕ್ರಮಣ ಮತ್ತು ಅತ್ಯಾಚಾರ ನಡೆಯುತ್ತಿರುವ ಪ್ರಮಾಣ ಹೆಚ್ಚುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ. ರಾಜ್ಯದ ಮಹಿಳೆಯರ ಮೇಲೆ ಅತ್ಯಾಚಾರ ಪ್ರಮಾಣ ಹೆಚ್ಚಾಗಿರುವುದು ಕಂಡು ಬಂದಿಲ್ಲ ಎಂದು ಹೇಳಿದ್ದಾರೆ. ಅದನ್ನು ತಡೆಯಲು ಸರ್ಕಾರ ಯಾವ ಪರಿಣಾಮಕಾರಿ ಕ್ರಮ ಕೈಗೊಂಡಿದೆ ಎಂದರೆ ಸಂಬಂಧಪಟ್ಟ ಆರೋಪಿಗಳನ್ನು ದಸ್ತಗಿರಿ ಮಾಡಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಲಯಕ್ಕೆ ಸಲ್ಲಿಸಲಾಗುವುದು ಎಂದು ಹೇಳಿದ್ದಾರೆ. ನಾನು ಸನ್ಮಾನ್ಯ ಮುಖ್ಯ ಮಂತ್ರಿಯವರನ್ನು ತಮ್ಮ ಮುಖಾಂತರ ಕೇಳುವುದಿಷ್ಟೆ, ಚಿತ್ರದುರ್ಗ ಮತ್ತು ಗುಲ್ಬರ್ಗದಲ್ಲಿ ಮಹಿಳೆಯರನ್ನು ಬೆತ್ತಲೆ ಮಾಡಿ, ಮಾನಭಂಗ ಮಾಡಿದ್ದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಎನ್ನುವುದು ಒಂದು ಪ್ರಶ್ನೆ. ಇದರ ಬಗ್ಗೆ ತಾವು ಏನು ಕ್ರಮ ಕೈಗೊಂಡಿದ್ದೀರಿ ಎಂದು

ಕೇಳಲಿಕ್ಕೆ ಇಷ್ಟಪಡುತ್ತೇನೆ. ಎರಡನೆಯದಾಗಿ ಇಡೀ ರಾಜ್ಯದಲ್ಲಿ ವರದಕ್ಷಿಣೆಯಿಂದ ಹೆಣ್ಣು ಮಕ್ಕಳು ತುಂಬ ಕಷ್ಟ ಅನುಭವಿಸುತ್ತಿದ್ದಾರೆ. ಎಲ್ಲರೂ ಕೂಡ ವರದಕ್ಷಿಣೆ ಹೆಸರಿನಲ್ಲಿ ಶೋಷಣೆ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು ಕೇಳಲಿಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗ ಕಳೆದ 3 ವರ್ಷಗಳಿಂದ ರಾಜ್ಯದ ಮಹಿಳೆಯರ ಮೇಲೆ ನಡೆದ ಅತ್ಯಾಚಾರ, ದೌರ್ಜನ್ಯದ ಪಟ್ಟಿ ಇದೆ. ವರದಕ್ಷಿಣೆ ಸಾವು 1990ರಲ್ಲಿ 228, 1991ರಲ್ಲಿ 227, 1992ರಲ್ಲಿ ೧೯೫. ಈ ವರದಕ್ಷಿಣೆ ವಿಚಾರದಲ್ಲಿ ಈಗಾಗಲೇ ವರದಕ್ಷಿಣೆ ಸಾವಿನ ಪ್ರಕರಣವನ್ನು ಘೋರ ಅಪರಾಧವೆಂದು ಪರಿಗಣಿಸಿ ನಾವು ಇಲಾಖೆಯ ಉನ್ನತಾಧಿಕಾರಿಗಳು ಅಂದರೆ ಡಿ.ಎಸ್.ಪಿ. ಮಟ್ಟದ ಮೇಲಿನ ಅಧಿಕಾರಿಗಳ ಮುಖಾಂತರ ನೇರವಾಗಿ ನಾವು ತನಿಖೆ ಮಾಡಿಸುತ್ತಿದ್ದೇವೆ. ಈಗ ಮಹಿಳೆಯರ ಮೇಲೆ ವರದಕ್ಷಿಣೆ ಸಾವು ಅತ್ಯಾಚಾರ ದೌರ್ಜನ್ಯ ಮತ್ತು ಅವರನ್ನು ದುರುಪಯೋಗ ಮಾಡಿಕೊಂಡು ಏನು ವ್ಯವಹಾರ ಮಾಡತಕ್ಕಂಥಾದ್ದು ಇದೆ ಇದೆಲ್ಲವನ್ನು ನಿಗ್ರಹಿಸಬೇಕೆಂದು ಹೇಳಿ ಈಗಾಗಲೇ ಸರ್ಕಾರದಲ್ಲಿ ಒಂದು ಆಲೋಚನೆ ಮಾಡಿದ್ದೇವೆ. ಅಂದರೆ ಯಾವ ರೀತಿಯಲ್ಲಿ ಪರಿಶಿಷ್ಟ ವರ್ಗ, ಪರಿಶಿಷ್ಟ ಪಂಗಡದವರ ಮೇಲೆ ಆಗತಕ್ಕ ದೌರ್ಜನ್ಯಗಳಿಗೆ ನಾವು ಪ್ರತ್ಯೇಕವಾಗಿ ಒಂದು ಸೆಲ್ ಮಾಡಿದ್ದೇವೆ, ಅದೇ ಪ್ರಕಾರ ನಾವು ಮಹಿಳೆಯರ ಮೇಲೆ ಏನಾದರೂ ದೌರ್ಜನ್ಯ, ಅತ್ಯಾಚಾರ, ವರದಕ್ಷಿಣೆ ಸಾವು ಇದನ್ನೆಲ್ಲಾ ನಾವು ಸರಿಯಾಗಿ ನಿಗ್ರಹಿಸಬೇಕೆಂಬ ಉದ್ದೇಶದಿಂದ ವುಮೆನ್ಸ್ ರೈಟ್ಸ್ ಅಂಡ್ ಪ್ರೊಟೆಕ್ಷನ್ ಸೆಲ್ ಎಂದು ಪ್ರತ್ಯೇಕವಾಗಿ ಮಾಡಬೇಕೆಂದು ಸರ್ಕಾರದ ಆಲೋಚನೆಯಲ್ಲಿದೆ. ಅದನ್ನು ನಾವು ಸದ್ಯದಲ್ಲಿ ಮಾಡುತ್ತೇವೆ ಮತ್ತೆ ಕೆಲವು ಪೇಟೆಗಳಲ್ಲಿ ಮಹಿಳೆಯರಿಂದಲೇ ನಿರ್ವಹಿಸತಕ್ಕಂಥ ಪೋಲೀಸ್ ಸ್ಟೇಷನ್‌ಗಳನ್ನು ಕೂಡ ನಾವು ಮಾಡಬೇಕೆಂದಿದ್ದೇವೆ. ನಮ್ಮ ಸರ್ಕಾರ ಸದ್ಯದಲ್ಲಿ ಬೆಂಗಳೂರಿನಲ್ಲಿ ಮಹಿಳೆಯರೇ ನಿರ್ವಹಿಸತಕ್ಕಂತ ಪೋಲೀಸ್ ಸ್ಟೇಷನ್ ಅನ್ನು ಪ್ರಾರಂಭಿಸಲಾಗುವುದು.

ಶ್ರೀ ವಾಟಾಳ್ ನಾಗರಾಜ್ : ಅವರು ಬಹಳ ಕಡಿಮೆ ಇರುವುದರಿಂದ ಅವರನ್ನು ಕಾಯಲು ಪುರುಷರು ಬೇಕಾಗುತ್ತದೆ. ಸ್ವಲ್ಪ ಯೋಚನೆ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಮನೆಯಲ್ಲಿ ಪುರುಷರನ್ನು ಕಾಯಲಿಕ್ಕೆ ಮಹಿಳೆಯರು ಬೇಕು. ಮನೆಯ ಹೊರಗಡೆ ಮಾತ್ರ ನೀವು ಕಾಯಬೇಕು. ಇದು ಹೇಗೆ ಎಂದು ನನಗೆ ಅರ್ಥವಾಗುವುದಿಲ್ಲ. ಆದ್ದರಿಂದ ಇದಕ್ಕೆ ನಾವು ಬೇರೆ ಬೇರೆ ಕಾರ್ಯಕ್ರಮವನ್ನು ಹಾಕಿ ನಿರ್ದಾಕ್ಷಿಣ್ಯವಾಗಿ ಇಂತಹ ಪ್ರಕರಣಗಳನ್ನು ನಾವು ನಿಲ್ಲಿಸಲು ಕ್ರಮವನ್ನು ಕೈಗೊಳ್ಳುತ್ತೇವೆ. ಚಿತ್ರದುರ್ಗ ಗುಲ್‌ಬರ್ಗ ವಿಚಾರ ಹೇಳಿದ್ದೀರಿ, ಬೇಕಾದರೆ ಅದರ ಮಾಹಿತಿಯನ್ನು ತಮಗೆ ಪ್ರತ್ಯೇಕವಾಗಿ ಕಳುಹಿಸುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ವುಮೆನ್ ರೈಟ್ಸ್ ಅಂಡ್ ಪ್ರೊಟೆಕ್ಷನ್ ಸೆಲ್ ಮಾಡುತ್ತಿರುವುದು ನಿಜಕ್ಕೂ ಕರ್ನಾಟಕ ರಾಜ್ಯಕ್ಕೆ ಮಾತ್ರವಲ್ಲ ಇಡೀ ದೇಶಕ್ಕೆ ಮಾದರಿಯಾಗಿದೆ. ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ., ಆ ರೈಟ್ಸ್‌ನ್ನು ಅವರಿಗೆ ಕೊಡಬೇಕು. ಅವರಿಗೆ ನಿರ್ಬಂಧ ಹಾಕಿ ಅವರು ಮುಂದುವರಿಯುವ ದಿಕ್ಕಿನಲ್ಲಿ ತೊಂದರೆಯಾಗದ ರೀತಿಯಲ್ಲಿ ಗಮನಕೊಡಬೇಕೆಂದು ಹೇಳುತ್ತೇನೆ.

ಚಿತ್ರದುರ್ಗ, ಗುಲ್ಬರ್ಗಾದಲ್ಲಿ ಮಹಿಳೆಯರ ಮಾನಭಂಗ ಆದ ವಿಚಾರವನ್ನು ತಿಳಿಸಿದೆ. ಅದು ತಮ್ಮ ಗಮನಕ್ಕೆ ಬಂದಿಲ್ಲವೇ ಆ ಬಗ್ಗೆ ಯಾವಾಗ ಮಾಹಿತಿ ತರಿಸಿಕೊಳ್ಳುತ್ತೀರಿ ಮತ್ತು ಏನು ಕ್ರಮ ಕೈಗೊಳ್ಳುತ್ತೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ತಾವು ಆ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ಆ ಬಗ್ಗೆ ನಾನು ಸರಿಯಾದ ಮಾಹಿತಿಯನ್ನು ತಮಗೆ ಕಳುಹಿಸುತ್ತೇವೆ ಅಥವಾ ಸದನದಲ್ಲಿ ಆ ವಿಷಯವನ್ನು ಪ್ರಸ್ತಾಪ ಮಾಡಿದರೆ ಉತ್ತರಿಸುತ್ತೇನೆ.

ಉಪಾಧ್ಯಕ್ಷಿಣಿಯವರು : ಮಾನ್ಯ ಪುಟ್ಟಸ್ವಾಮಿ ಗೌಡರ್, 125(249)ನೇ ಪ್ರಶ್ನೆಗೆ ಮಾನ್ಯ ಮುಖ್ಯ ಮಂತ್ರಿಗಳು ಸಮಯ ಕೇಳಿದ್ದಾರೆ. ಆದ್ದರಿಂದ ಅದನ್ನು ನಾನು ಮುಂದೆ ತೆಗೆದುಕೊಳ್ಳುತ್ತೇನೆ.

ಸಿ.ಡಿ.ಎಸ್. ನಾಲೆಯ ಮೇಲಿನ ಸೇತುವೆಗಳು

605 - ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಕ್ಕದೇವರಾಯಸಾಗರ ನಾಲೆಯಲ್ಲಿ ಎಷ್ಟು ಸೇತುವೆಗಳು ಹಾಳಾಗಿವೆ (ಬಿದ್ದು ಹೋಗಿವೆ)?

ಆ) ಅದನ್ನು ಯಾವಾಗ ಕಟ್ಟಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : :

ಅ) ಒಂದು.

ಆ) 1993-94ನೇ ಸಾಲಿನಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಶ್ರೀಮತಿ ದಮಯಂತಿ ಬೋರೇಗೌಡ : ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಚಿಕ್ಕದೇವರಾಯ ಸಾಗರ ನಾಲೆಯಲ್ಲಿ ಒಂದು ಸೇತುವೆ ಹಾಳಾಗಿದೆ ಎಂದು ಹೇಳಿದ್ದೀರಿ. ಆಕ್ಚುವಲ್ಲಾಗಿ ಒಂದು ಸೇತುವೆ ಬಿದ್ದೇ ಹೋಗಿದೆ. ಇನ್ನು ಮೂರು ಸೇತುವೆಗಳು ಹಾಳಾಗಿವೆ. ಇದರಿಂದಾಗಿ ರೈತರಿಗೆ ಬಹಳ ತೊಂದರೆಯಾಗಿರುವುದರಿಂದ ಕೂಡಲೆ ಆ ಸೇತುವೆ ಕಟ್ಟುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಇದನ್ನೆಲ್ಲಾ ದುರಸ್ತಿ ಮಾಡತಕ್ಕ ಕಾರ್ಯಕ್ರಮವನ್ನು 1993-94ರ ಸಾಲಿನಲ್ಲಿ ಕೈಗೊಳ್ಳುತ್ತಿದ್ದೇವೆ ಮತ್ತು ಚಿಕ್ಕದೇವರಾಯನ ಅಣೆಕಟ್ಟು ಮತ್ತು ನಾಲೆಯ ಆಧುನೀಕರಣ ಕಾಮಗಾರಿಯನ್ನು ರಾಷ್ಟ್ರೀಯ ಜಲನಿರ್ವಹಣಾ ಯೋಜನೆಯ ಅಡಿಯಲ್ಲಿ ತೆಗೆದುಕೊಳ್ಳಬೇಕೆಂದು ನಿಶ್ಚಯ ಮಾಡಿದ್ದೇವೆ. ಅನೇಕ ಶಿಥಿಲಗೊಂಡಿರುವ ಸೇತುವೆಗಳ ದುರಸ್ತಿ ಕಾರ್ಯವನ್ನೂ ಕೂಡ ಈ ಯೋಜನೆಯ ಅಡಿಯಲ್ಲಿ ತೆಗೆದುಕೊಳ್ಳುವುದಕ್ಕೆ ಆದೇಶ ಕೊಡುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ : ಚಿಕ್ಕದೇವರಾಯಸಾಗರ ನಾಲೆಯ ಮೇಲಿರುವ ಸೇತುವೆ ದುರಸ್ತಿ ಆದೇರೀತಿ ನಾಲೆ ಪಕ್ಕದಲ್ಲಿ ಬರತಕ್ಕ ಸರ್ವಿಸ್ ರೋಡ್‌ನಲ್ಲಿ ಬರತಕ್ಕ ಸೇತುವೆಗಳು ರೈತರ ಉಪಯೋಗಕ್ಕೆ ಇದ್ದರೂ ಅವು ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ಬಂದು ದುರಸ್ತಿ ಕಾರ್ಯಕ್ರಮದಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ನಾಲಾ ಸರ್ವಿಸ್ ರಸ್ತೆಗಳನ್ನು ಮತ್ತು ಇರಿಗೇಷನ್